ಪದಗಳನ್ನು ಸೂಕ್ತ ರೀತಿಯಲ್ಲಿ ನಮ್ಮ ಕೆಲವು ಬೆಳವಣಿಗೆಗಳಿಗೆ ಹೊಂದಿಸಿ ನಮ್ಮದಾಗಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ದೃಶ್ಯಕಲಾರಂಗಕ್ಕೆ ಈ ಅನುಕೂಲ ಸಿಗಲಿಲ್ಲ. ಹಾಗೆ ನೋಡಿದರೆ 64 ಕಲೆಗಳಲ್ಲಿ ಸಾಹಿತ್ಯವೂ ಒಂದಷ್ಟೆ. ಕಲೆ ಮತ್ತು ಸಾಹಿತ್ಯಗಳೆರಡೂ ಮೂಲತಃ 'ಕಲ್ಪನೆ'ಯನ್ನೆ ಅವಲಂಬಿಸಿವೆ. ಎರಡೂ ಪ್ರಕಾರಗಳು ರಸ–ಭಾವ–ಅನುಭಾವಗಳನ್ನು ಅನುಸರಿಸುತ್ತವೆ. ಆದರೆ ಈ ಎರಡೂ ವಿಭಿನ್ನ ಅಭಿವ್ಯಕ್ತಿ ಪ್ರಕಾರಗಳೇ ಸರಿ. ಅಕ್ಷರ ಸಾಹಿತ್ಯದ ಪದಗಳಲ್ಲಿನ 'ಅರ್ಥ' ಮೂಲದ ಅನುಭವ ಅರಸುವ ಸಾಹಿತ್ಯ ವಿಮರ್ಶೆಗಿಂತಲೂ ದೃಶ್ಯಕಲೆಯ ವಿಮರ್ಶೆಯು ಕಲಾಅಭಿವ್ಯಕ್ತಿಯೊಂದರಲ್ಲಿ ಅರ್ಥಗಳಿಗಿಂತಲೂ ರೇಖೆ, ಬಣ್ಣ, ರೂಪಗಳ ಅನುಭವ–ಅನುಭಾವಗಳ ಒಳನೋಟಗಳನ್ನು ಅನ್ವೇಷಿಸುತ್ತದೆ. ಸಂವೇದನಾಶೀಲ ತೀವ್ರತೆಯನ್ನ ಪರಿಗಣಿಸುತ್ತದೆ.

ಈ ಅನ್ವೇಷಿಸುವಿಕೆ ಮತ್ತು ಪರಿಗಣಿಸುವಿಕೆಗಳು ಇಂದು ಬಹುಮುಖ್ಯವಾಗಿ ನಮ್ಮ ಸಂದರ್ಭದ ಹಲವು ವಿಚಾರಗಳ, ಆಗುಹೋಗುಗಳ ಚಿಂತನೆಯ ಸಾಂಸ್ಕೃತಿಕ ಅಧ್ಯಯನದಂತಹ ಬರಹವಾಗಿ ರೂಪಾಂತರಗೊಂಡಿರುತ್ತದೆ. ಇದು ಇಂದಿನ ಕನ್ನಡ ಸಾಹಿತ್ಯ ವಿಮರ್ಶೆ ಮತ್ತು ದೃಶ್ಯಕಲಾ ವಿಮರ್ಶೆಗಳೆರಡಕ್ಕೂ ಬಹುತೇಕ ಅನ್ವಯಿಸುತ್ತದೆ. ಈ ಹಿಂದಿನ ಹಲವರ, ಹಲವು ಸಂದರ್ಭಗಳ ವಿಮರ್ಶಾ ಮಾನದಂಡಗಳನ್ನು ನಮ್ಮ ಸಂದರ್ಭದಲ್ಲಿ ಅನ್ವಯಿಸಿ ನೋಡುವ ಔಚಿತ್ಯವು ಪ್ರಶ್ನಾರ್ಹವೂ ಆಗಿದೆ.

◆ **ದೃಶ್ಯಭಾಷೆಗೆ ಭಾಷೆಯ ಹಂಗಿಲ್ಲ. ಕನ್ನಡದಲ್ಲಿ ಬರೆಯಲು ಆರಂಭಿಸಿದ ನೀವು ಇಂಗ್ಲಿಷಿನಲ್ಲಿಯೂ ಬರೆಯುವಂತೆ ಆದದ್ದು ಯಾಕೆ? ಹೇಗೆ?**

ಈ ಮೊದಲೇ ಹೇಳಿದಂತೆ ಹಲವು ಕಲಾವಿದರ ಬೇಡಿಕೆಗೆ ಪೂರಕವಾಗಿ ಬರೆದ ಕೆಟಲಾಗ್ ಸಾಹಿತ್ಯ ಅದು. ಕನ್ನಡದ ನನ್ನ ಬರಹಗಳ ಇತರರ ಅನುವಾದ ಪ್ರಕ್ರಿಯೆ ಸಮಾಧಾನವಾಗದೇ ಇಂಗ್ಲಿಷಿನಲ್ಲಿಯೂ ಬರೆಯಬೇಕಾಯಿತು. ಕನ್ನಡದ ಸಂವೇದನಾಶೀಲ ಸೂಕ್ಷ್ಮ ಅನುಭವಲೋಕವೊಂದನ್ನು ಅಷ್ಟೇ ಸೂಕ್ಷ್ಮ, ಸೂಕ್ತ, ತೀವ್ರ, ನಿಷ್ಕೃಷ್ಟ ಪದಗಳ ಬಳಕೆಯಿಂದ ಗ್ರಹಿಸುವ ಪ್ರಯತ್ನ ಆಗಬೇಕು. 'ಅರಗಿಸಿಕೊಂಡಿದ್ದಾರೆ' (absorbed) ಎಂಬ ಪದಕ್ಕೆ ಬದಲಾಗಿ ಜೀರ್ಣಿಸಿಕೊಂಡಿದ್ದಾರೆ (digested) ಎಂದು ಒರಟಾಗಿ ಅನುವಾದಿಸಿಕೊಟ್ಟರೆ ಹೇಗೆ? ಹಾಗಾಗಿ ನಾನೇ ಇಂಗ್ಲಿಷಿನಲ್ಲಿಯೂ ಬರೆಯುವ, ಅನುವಾದಿಸುವ ಸಂದರ್ಭ ಸೃಷ್ಟಿಯಾಯಿತು.

◆ **ನಿಮ್ಮ ಹುಡುಕಾಟ– ಅನ್ವೇಷಿಸುವ ಗುಣ ನಿಮ್ಮನ್ನು ಕಲ್ಲುಬಂಡೆಗಳ ಬೆಟ್ಟದ ಬುಡಕ್ಕೆ, ಗುಹೆಗಳ ಒಳಕ್ಕೆ ಕರೆದೊಯ್ದಿದೆ. ಈ ಹೊಸ ಯಾನ ಆರಂಭವಾದದ್ದು ಹೇಗೆ?**

ಮೂಲತಃ ಹಳ್ಳಿಗನಾದ ನಾನು ಬೆಟ್ಟಗುಡ್ಡ, ಅರಣ್ಯಗಳನ್ನು ಆರಾಧಿಸುವವನೇ ಆಗಿರುವೆ. ನಮ್ಮೆಲ್ಲರಲ್ಲಿಯೂ ಆದಿಮಪ್ರಜ್ಞೆಯು ಇದ್ದೇ ಇದೆ. ಒಮ್ಮೆ ಬೆಂಗಳೂರಿನ ಸಿಸ್ಕಾನ್ ಆರ್ಟ್ ಗ್ಯಾಲರಿಯು ತನ್ನ 'ಕಲಾಯಾತ್ರಾ' ಶೀರ್ಷಿಕೆಯ ಕಲಾಪ್ರದರ್ಶನಗಳ ಅಡಿ ಉಜ್ಜಯನಿಯ ವಾಕನ್ಕರ್‌ರವರೊಂದಿಗೆ ಮಾತುಕತೆಯ ಅವಕಾಶ ಕಲ್ಪಿಸಿತ್ತು. ಇಂದು ವಿಶ್ವಪಾರಂಪರಿಕ ನೆಲೆಯಾಗಿರುವ ಮಧ್ಯಪ್ರದೇಶದ ಆದಿಮ ಕಲೆಯ ನೆಲೆ ಭೀಮ್‌ಬೇಟ್ಕಾದ ಅನ್ವೇಷಕರು ಅವರು. ಬಾದಾಮಿಯ ಸುತ್ತಮುತ್ತಲೂ ಹಲವು ನೆಲೆಗಳನ್ನು ಅನ್ವೇಷಿಸಿ ಹೋಗಿದ್ದರು. ಅವರ ಪ್ರಭಾವ ಹಾಗೂ ನನ್ನಲ್ಲಿನ ಅಲೆಮಾರಿ ಪ್ರವೃತ್ತಿ ಕಾರಣದಿಂದಲೇ ನಮ್ಮ ರಾಜ್ಯದಲ್ಲಿನ ಟೇಕಲ್, ಬೆಟ್ಟಮಾದಮಂಗಲ, ಆಂಧ್ರ ಪ್ರದೇಶದ ಕಂಗುಂದಿ, ರಾಯದುರ್ಗಗಳಲ್ಲಿ ಹೊಸ ಶಿಲಾಚಿತ್ರ (rock art) ನೆಲೆಗಳನ್ನು ಪರಿಶೋಧಿಸಿದೆ.